ಎಂದು ಬೈ ಹೇಳಿ ಹೊರಟು ಹೋಗಿದ್ದರು. ಋಗ್ವೇದಿಯವರು ಒಂದು ರೀತಿ ಹಗುರವಾಗಿಯೇ ಮನೆ ಸೇರಿದ್ದರು.

ಭಾನುವಾರದಿಂದ ಇವೊತ್ತಿನವರೆಗೆ ನಡೆದ ಎಲ್ಲಾ ಘಟನೆಗಳು ಋಗ್ವೇದಿಯ ಮನಸ್ಸಿನಲ್ಲಿ ಕೋಲಾಹಲವನ್ನುಂಟು ಮಾಡಿ ನಿದ್ದೆ ಬಾರದೆ ಹೊರಳಾಡಿದ್ದರು. ಸಮಯ ಬೆಳಗಿನ ಐದೂವರೆ ಗಂಟೆಯಾಗಿತ್ತು. ಯಾರೋ ಗೇಟು ಬಡಿದಂತಾಗಿ ಹೋಗಿ ಬಾಗಿಲು ತೆರೆದು ನೋಡಿದ್ದರು. ಯಾರೂ ಇರಲಿಲ್ಲ. ರೂಮಿಗೆ ಹಿಂತಿರುಗಿ ಏನನ್ನೋ ಹುಡುಕುವಂತೆ ಹೆಂಡತಿಯ ಅಲ್ಮೈರಾ ಓಪನ್ ಮಾಡಿದ್ದರು. ಅಲ್ಮೈರಾದಲ್ಲಿ ಹೆಂಡತಿಯ ಮೂರು ಸೀರೆಗಳಿದ್ದವು. ಸುಮಾರು ಅರವತ್ತು, ಎಪ್ಪತ್ತು ಸೀರೆಗಳನ್ನು ಕೆಲಸದವಳಿಗೆ ಆಗಾಗ ಕೊಟ್ಟಿದ್ದರು. ಚಿನ್ನದ ಆಭರಣಗಳನ್ನು ಸೊಸೆಯಂದಿರು ಹೆಂಡತಿ ಸತ್ತಾಗಲೇ ಅರ್ಧರ್ಧ ಹಂಚಿಕೊಂಡಿದ್ದರು. ಇದ್ದ ಮೂರು ಸೀರೆಗಳಲ್ಲಿ ಒಂದು ಸೀರೆ ತುಂಬಾ ಚನ್ನಾಗಿತ್ತು. ಹೊರಕ್ಕೆ ತೆಗೆದು ಮುಖ ಒರೆಸಿದ್ದರು. ಏನೋ ಒಂಥರಾ ವಾಸನೆ ಮೈ ಜುಂ ಅನ್ನಿಸಿತ್ತು. ಸೀರೆಯನ್ನು ಕೈಯಲ್ಲಿ ಹಿಡಿದು ಫ್ಯಾನಿನ ಕಡೆ ನೋಡಿದ್ದರು. ಏನೋ ಹೊಳೆದಂತಾಯಿತು. ಅರೆ, ಒಂದು ಅಟೆಂಪ್ಟ್ ಏಕೆ ಮಾಡಬಾರದು? ಎಂಥದ್ದೋ ಭಯಂಕರ ಕುತೂಹಲದಿಂದಾಗಿ ಹಗುರವಾದ ಟಿಂಬರ್ ಟೀಪಾಯಿಯನ್ನು ಎತ್ತಿ ಹಾಸಿಗೆಯ ಮೇಲಿಟ್ಟು, ಟೀಪಾಯಿ ಮೇಲೆ ನಿಂತು ಸೀರೆಯನ್ನು ಫ್ಯಾನಿಗೆ ಬಿಗಿಯಾಗಿ ಕಟ್ಟಿದ್ದರು. ಕೆಳಗಿಳಿದು ಏನನ್ನೋ ಯೋಚನೆ ಮಾಡಿ ಅಡುಗೆ ಮನೆಗೆ ಹೋಗಿ ನೀರು ಕುಡಿದಿದ್ದರು. ಮತ್ತಿನ್ನೇನನ್ನೋ ಹುಡುಕುವಂತೆ ಮನೆಯಲ್ಲೆಲ್ಲ ಹತ್ತು ನಿಮಿಷ ಓಡಾಡಿ ಏನೆಂದು ತಿಳಿಯದೆ ರೂಮಿಗೆ ವಾಪಸ್ಸಾದರು. ಟೀಪಾಯಿ ಹತ್ತಿ ಸೀರೆಯನ್ನು ಕೊರಳಿಗೆ ಉರುಳಾಗಿ ಕಟ್ಟಿಕೊಂಡಿದ್ದರು. ಕೊರಳ ಸುತ್ತ ಸೀರೆಯ ಉರುಳು ಮೆತ್ತಗೆ ಇತ್ತು. ತಮ್ಮ ಪ್ರಿಪರೇಶನ್ ಚನ್ನಾಗಿದೆ ಎಂದು ತಮ್ಮನ್ನು ತಾವೇ ಮೆಚ್ಚಿಕೊಂಡಿದ್ದರು. ಹಾಸಿಗೆಯ ಮೇಲೆ ಇಟ್ಟಿದ್ದ ಫೋನ್ ರಿಂಗಾಗಿತ್ತು. ಟೀಪಾಯಿ ಮೇಲಿಂದ ಯಾರಿರಬಹುದೆಂದು ನೋಡಿದ್ದರು. ಮೊದಲನೇ ಮಗ ಚಕ್ರಪಾಣಿಯ ಹೆಸರು ಡಿಸ್‌ಪ್ಲೇ ಆಗುತ್ತಿತ್ತು. ಎರಡು ನಿಮಿಷಗಳ ನಂತರ ಎರಡನೇ ಮಗ ಚಕ್ರವರ್ತಿಯದು. ಅದಾದ ಎರಡು ನಿಮಿಷಗಳ ನಂತರ ಡಾಕ್ಟರ್ ನಾಗರಾಜ ಮೂರ್ತಿಯವರದ್ದು. ಅದಾದ ನಂತರ ಮನೆ ಕೆಲಸದವಳ ಫೋನು. ಋಗ್ವೇದಿಯವರು ನಕ್ಕು ಇವರೆಲ್ಲರೂ ಈ ಹೊತ್ತಿನಲ್ಲಿ ಏಕೆ ಫೋನ್ ಮಾಡುತ್ತಿರಬಹುದೆಂಬ ಅಪರಿಮಿತ ಕುತೂಹಲದಿಂದ ಫೋನ್ ತೆಗೆದುಕೊಳ್ಳಲೆಂದು ಬಗ್ಗಿ ಕೈ ಚಾಚಲು ಹೋಗಿದ್ದರು. ಕ್ಷಣ ಮಾತ್ರದಲ್ಲಿ ನಿಂತಿದ್ದ ಟೀಪಾಯಿ ಪಕ್ಕಕ್ಕೆ ಸರಿದು ಋಗ್ವೇದಿಯವರ ಕೊರಳು ಹೆಂಡತಿಯ ಸೀರೆಯ ಉರುಳಿಗೆ ಗಟ್ಟಿಯಾಗಿ ಬಿಗಿದುಕೊಂಡಿತ್ತು. ದೇಹ ಏಳೆಂಟು ಸೆಕೆಂಡ್ ಕಾಲ ಜೋರಾಗಿ ಅಲುಗಾಡಿ ಕೊನೆಗೆ ನಿಶ್ಚಲವಾಗಿತ್ತು.

### ಕೇಶವರೆಡ್ಡಿ ಹಂದ್ರಾಳ

ಕನ್ನಡದ ಪ್ರಸಿದ್ಧ ಮತ್ತು ಮಹತ್ವದ ಕತೆಗಾರ ಕೇಶವರೆಡ್ಡಿ ಹಂದ್ರಾಳ ಓದುಗರನ್ನು ದಶಕಗಳ ಕಾಲ ಹಿಡಿದಿಟ್ಟುಕೊಂಡ ಲೇಖಕ. 'ಹಂದ್ರಾಳ', 'ಅಂತಃಪುರ', 'ಬರದ ನಾಡಿನಲ್ಲಿ ಬೆಳದಿಂಗಳು', 'ಜಡೆಗೆ ಗುಲ್‌ಮೊಹರ್ ಕೈಗಳು', 'ಒಂದು ಹಿಡಿ ಮಣ್ಣು', 'ಬಾರಕ್ಕ ಬೆಳದಿಂಗಳೆ', 'ಈ ಕ್ಷಣದ ಬುದ್ಧ' ಅವರ ಕೆಲವು ಕಥಾಸಂಗ್ರಹಗಳು. 'ಒಕ್ಕಲ ಒನಪು', 'ಮರೆತ ಭಾರತ'– ಪ್ರಬಂಧ ಸಂಕಲನಗಳು. ಸಿನಿಮಾ, ಧಾರಾವಾಹಿಗಳಿಗೆ ಕತೆ, ಸಂಭಾಷಣೆ ಬರೆದಿದ್ದಾರೆ. 'ನನ್ನ ಕ್ರಾಂತಿಯ ಹುಡುಗಿ' ಅವರ ಕವನ ಸಂಗ್ರಹ. ಈ ತನಕ 15 ಪುಸ್ತಕಗಳನ್ನು ಪ್ರಕಟಿಸಿದ್ದಾರೆ.